ಬಳಸಿಕೊಂಡು ಪದಗಳ ವ್ಯುತ್ಪತ್ತಿ, ಅವುಗಳ ಮೂಲಚೂಲಗಳನ್ನು ಕುರಿತಾದ ಚರಿತೆಯನ್ನು ಸ್ವಾರಸ್ಯವಾಗಿ ತೆರೆದಿಡುವ ಪ್ರಯತ್ನಮಾಡಿದ್ದಾರೆ. ಈ ವಿಷಯದಲ್ಲಿ ಅವರದು ದಣಿವರಿಯದ ಕೆಲಸ.

ಸಾಹಿತ್ಯ ಕ್ಷೇತ್ರದಲ್ಲಿ ಸಾರ್ಥಕವಾದ ಕೆಲಸ ಮಾಡಿದವರ ವ್ಯಕ್ತಿತ್ವ ಮತ್ತು ಸಾಹಿತ್ಯಗಳನ್ನು ಕುರಿತೂ ಗ್ರಂಥಗಳನ್ನೂ ಪಿವಿಎನ್ ರಚಿಸಿದ್ದಾರೆ. ಕೆ. ನರಸಿಂಹಮೂರ್ತಿ, ಕೆ.ವಿ. ಅಯ್ಯರ್: ಬದುಕು ಮತ್ತು ಸಾಹಿತ್ಯ, ಬರ್ಟ್ರೆಂಡ್ ರಸೆಲ್, ಎಲ್. ಎಸ್. ಶೇಷಗಿರಿರಾವ್ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಬರೆದುಕೊಟ್ಟಿರುವ ಎಂ.ವಿ.ಸೀ ಅವರ ಬದುಕು-ಬರಹ ಕುರಿತ ಪುಸ್ತಕ, ಇವೆಲ್ಲ ಈ ಸಾಹಿತಿಗಳ ಬದುಕು-ಬರಹಗಳನ್ನು ಕುರಿತ ಸಂಕ್ಷಿಪ್ತವಾದರೂ ಸಮರ್ಪಕವಾದ ಚಿತ್ರವನ್ನು ಪ್ರಸ್ತುತ ಪಡಿಸುವುದರಲ್ಲಿ ಸಾರ್ಥಕವಾಗಿವೆ. ಅವು ಕೇವಲ ವ್ಯಕ್ತಿ ಪರಿಚಯದ ನೆಲೆಯಲ್ಲಿ ಉಳಿಯದೆ ಆಯಾ ಸಾಹಿತಿಗಳ ಬರಹಗಳ ಕುರಿತಾದ ಹಾಳತವಾದ ವಿಮರ್ಶೆಯನ್ನೂ ಒಳಗೊಂಡಿರುವ ಕಾರಣ ಇವುಗಳ ಓದು ಸಾರ್ಥಕವಾಗುತ್ತದೆ.

ಸಂಶೋಧನೆ, ಸಂಪಾದನೆ, ನಿಘಂಟು, ವಿಮರ್ಶೆಯೇ ಮುಂತಾದ ಹೆಚ್ಚಿನ ಪಾಂಡಿತ್ಯ, ಪರಿಶ್ರಮಗಳನ್ನಪೇಕ್ಷಿಸುವ ಕ್ಷೇತ್ರದಲ್ಲಿಯೇ ಮುಳುಗಿಹೋಗಿದ್ದ ಈ ವಿದ್ವಾಂಸರು ಒಂದು ಬದಲಾವಣೆ ಬೇಕೆನಿಸಿಯೋ ಏನೋ ಅಥವಾ ಅದಕ್ಕಿಂತ ಹೆಚ್ಚಾಗಿ ತಮ್ಮ ಅನುಭವ ಶೋಧನೆಯ ಸಲುವಾಗಿ ಅದರಿಂದ ಹೊರಬಂದು ಸೃಜನಶೀಲ ಕ್ಷೇತ್ರವಾದ ಕಾದಂಬರಿ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿ ಆ ಕ್ಷೇತ್ರದಲ್ಲೂ ತಮ್ಮ ಹೆಜ್ಜೆಗುರುತುಗಳನ್ನು ನಿಚ್ಚಳವಾಗಿ ಮೂಡಿಸಿರುವಂಥ ಒಂಬತ್ತು ಕಾದಂಬರಿಗಳನ್ನು ರಚಿಸಿರುವುದು ಒಂದು ವಿಸ್ಮಯದ ಸಂಗತಿಯೇ ಸರಿ. ಅವರೊಬ್ಬ ಯಶಸ್ವೀ ಕಾದಂಬರಿಕಾರರೆಂಬುದಕ್ಕೆ ಸಾಕ್ಷಿಯಾಗಿ 'ಸುಧಾ' ಕಾದಂಬರಿ ಸ್ಪರ್ಧೆಯಲ್ಲಿ ಸುಮಾರು ನಾಲ್ಕು ದಶಕಗಳ ಹಿಂದೆಯೇ ಪುರಸ್ಕಾರಕ್ಕೆ ಅರ್ಹವಾಗಿರುವ 'ಶೋಧನೆ' ಕಾದಂಬರಿ ಇದೆ. 'ಸಾಮಾನ್ಯ', 'ಅಂತರ', 'ವಿಕಾಸ', 'ಶೋಧನೆ', 'ನಿರ್ಧಾರ', 'ಹೋರಾಟ', 'ಸಂದಿಗ್ಧ', 'ಪರಿಸ್ಥಿತಿ', ಮತ್ತು 'ಧರ್ಮಕಾರಣ' ಕಾದಂಬರಿಗಳು ಸೃಜನಶೀಲ ಕ್ಷೇತ್ರಕ್ಕೆ ಪಿವಿಎನ್ ಅವರ ಕೊಡುಗೆಗಳು. ಇವು ಒಂದೊಂದೂ ತನ್ನ ವಸ್ತುವಿಶೇಷ ಮತ್ತು ಅದನ್ನು ನಿರ್ವಹಿಸಿರುವ ರೀತಿಯಿಂದಾಗಿ ಓದುಗರನ್ನು ಹಿಡಿದಿಟ್ಟುಕೊಂಡು ತನ್ನ ಕೇಂದ್ರದತ್ತ ಸೆಳೆದುಕೊಳ್ಳುತ್ತ ಓದಿಸಿಕೊಂಡುಹೋಗುವ ಗುಣವನ್ನು ಹೊಂದಿವೆ. ಅವರ ಕಾದಂಬರಿಗಳ ವಸ್ತು ಸಾಮಾನ್ಯವಾಗಿ ಮಧ್ಯಮವರ್ಗೀಯ ಕುಟುಂಬ ಕೇಂದ್ರಿತ. ಅದರಲ್ಲೂ ಹೆಚ್ಚಾಗಿ ಗಂಡು ಹೆಣ್ಣಿನ, ಇಲ್ಲವೆ ದಂಪತಿಗಳ ಸಾಂಸಾರಿಕ ಸಮಸ್ಯೆಗಳ ಸುತ್ತಲೇ ಇರುವಂಥದು.

ಸಮಾಜದ ಕಟ್ಟುಪಾಡುಗಳು, ನೈತಿಕ ಧಾರ್ಮಿಕ ಎಲ್ಲೆಕಟ್ಟುಗಳು ಇವೆಲ್ಲದರ ಹೊರತಾಗಿಯೂ ಗಂಡು ಹೆಣ್ಣು ಪರಸ್ಪರ ಆಕರ್ಷಣೆಗೊಳಗಾಗುವುದು ಸರ್ವೇಸಾಮಾನ್ಯವಾದ ಸಂಗತಿ. ವಿವಾಹಿತರಾಗಿದ್ದೂ ತಮ್ಮ ತಮ್ಮ ಸಾಂಸಾರಿಕ ಜೀವನದಲ್ಲಿ ಏನೋ ಒಂದು ಕೊರೆಯನ್ನು ಕಂಡುಕೊಂಡು ವಿವಂಚನೆಗೊಳಗಾದವರಂತೆ ಸಂದರ್ಭವಶದಿಂದ ಪರಸ್ಪರ ತೀರ ಸನಿಹಕ್ಕೆ ಬಂದ ಒಂದು ಕಾಲದ ಸಹಪಾಠಿಗಳಾಗಿದ್ದ ಮುರಳಿ ಮತ್ತು ಮಮತ ಇದು ಸಂಭವವಾಗದೆಂದು ಅನಿಸಿದ ಕಾಲಘಟ್ಟದಲ್ಲಿ ತಮ್ಮ ಎದೆಗುದಿತವನ್ನು ಬದಿಗೊತ್ತಿಕೊಂಡು ವಿವೇಚನೆಯ ತಕ್ಕಡಿಯಲ್ಲಿ ತಮ್ಮನ್ನು ತೂಗಿಕೊಂಡು ಲೋಕ ಮರ್ಯಾದೆ, ಸಮಾಜ ಜೀವನಗಳಿಗೆ ಗೌರವ ಕೊಡುವ ಸಾಮಾನ್ಯ ಸಾಂಸಾರಿಕರಾಗುವುದೇ 'ಸಾಮಾನ್ಯ' ಕಾದಂಬರಿಯ ವಸ್ತು. ಇಡೀ ಕಾದಂಬರಿ ಸೊಗಸಾದ, ಲವಲವಿಕೆಯ ಹಾಗೂ ಚುರುಕಾದ ಸಂಭಾಷಣೆಗಳಿಂದ ಕೂಡಿದ್ದು ಒಳ್ಳೆಯ ರೋಮ್ಯಾಂಟಿಕ್ ಕಾದಂಬರಿಯಂತೆ ಓದಿಸಿಕೊಂಡು ಹೋಗುತ್ತದೆ. ಮೊದಲ ಕಾದಂಬರಿಯಲ್ಲೇ ನಾರಾಯಣ ಅವರು ಸಾಧಿಸಿರುವ ಯಶಸ್ಸು ಸಾಮಾನ್ಯವಾದ್ದೇನಲ್ಲ.

'ಶೋಧನೆ' ಅವರ ಕಾದಂಬರಿಗಳಲ್ಲಿ ಅತ್ಯಂತ ಪ್ರಮುಖವಾದದ್ದು. ಶೀರ್ಷಿಕೆಗೆ ತಕ್ಕಂತೆ ಇದ್ದಕ್ಕಿದ್ದಂತೆ ಮನೆ ತೊರೆದು ಹೋದ ಮೂರ್ಛೆರೋಗಿಯಾದ ತಮ್ಮನನ್ನು ತಲಾಶು ಮಾಡುವ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡ ಅಣ್ಣನು ತನ್ನನ್ನೇ ಶೋಧನೆಗೆ ಒಳಪಡಿಸಿಕೊಳ್ಳುವುದರ ಜೊತೆಗೆ, ಒಟ್ಟಾರೆ ಮನುಷ್ಯ ಸಂಬಂಧಗಳ ಸ್ವರೂಪವನ್ನು, ಮನುಷ್ಯನ ಒಳಪದರಗಳನ್ನು ಶೋಧಿಸುತ್ತ ಹೋಗುವ ಪರಿಯನ್ನು